# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 11/2024**

**CW -17**

**PW-14**

ಸಾಕ್ಷಿಯ ಹೆಸರು : ಶುಭಕರ್

ತಂದೆ ಹೆಸರು : ಅನು ಮುಗೇರ

ಪ್ರಾಯ : **58 ವರ್ಷ**

ಉದ್ಯೋಗ : ಪಿ.ಎಸ್.ಐ. ಅಜೆಕಾರು ಪೋಲೀಸ್ ಸ್ಟೇಷನ್

ವಾಸ : ಕಾರ್ಕಳ

ದಿನಾಂಕ **:30.05.2025** ರಂದು ಪಿಡಬ್ಲ್ಯೂ - 14 / ಸಿಡಬ್ಲ್ಯೂ - 17 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು ದಿಃ 18.07.2020 ರಿಂದ 09.01.2023 ರ ವರೆಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ. ದಿಃ 14.07.2024 ರಿಂದ ಇಲ್ಲಿಯವರೆಗೂ ಅಜೆಕಾರು ಪೋಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ.

**CC 11/2024**
**CW-17**
**PW-14**

ನಾನು ಚಾಸಾ 16 ರವರಿಂದ ಈ ಪ್ರಕರಣಕ್ಕೆ ಸಬಂಧಿಸಿದ ಕಡತವನ್ನು ಪಡೆದುಕೊಂಡಿದ್ದು, ದಿಃ 05.01.2021 ರಂದು ಈ ಪ್ರಕರಣದ 3 ನೇ ಆರೋಪಿಯು ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು, ಠಾಣೆಗೆ ಹಾಜರಾಗಿದ್ದು, ನಾನು ದಸ್ತಗಿರಿ ಕ್ರಮ ಜರುಗಿಸಿ, ಜಾಮೀನಿನ ಮೆಲೆ ಬಿಡುಗಡೆ ಮಾಡಿರುತ್ತೇನೆ. ನಂತರ 3 ನೇ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ 3 ನೇ ಆರೋಪಿಯ ಗುರುತಿಗಾಗಿ ಚಾಸಾ 1 ರಿಂದ 5 ಮತ್ತು ಚಾಸಾ 11 ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.ಚಾಸಾ 3 ರಿಂದ 5 ರವರು ನಿಪಿ - 2, 4 ಮತ್ತು 13 ರಂತೆ ನನ್ನ ಮುಂದೆ ಮರುಹೇಳಿಕೆಯನ್ನು ನೀಡಿರುತ್ತಾರೆ.

ದಿಃ 06.01.2021 ರಂದು ಚಾಸಾ 6 ರವರಿಂದ ಫ್ಯಾಕ್ಟರಿಗೆ ಸಂಬಂಧಿಸಿದ ದಾಖಲೆಗನಳ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆ ಪೂರೈಸಿ, ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. 3 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರು ಹಾಜರಿರುವುದಿಲ್ಲ. ಗುರುತಿಸಲು ತಕರಾರು ಇರುವುದಿಲ್ಲ).

<u>ಪಾಟೀ ಸವಾಲುಃ</u> ಶ್ರೀ ಪಿ. ಎ. ಎಸ್. 1 ನೇ ಆರೋಪಿ ಪರ ವಕೀಲರಿಂದಃ

3 ನೇ ಆರೋಪಿಯಿಂದ ತಕ್ಷೀರು ಸ್ಥಳದ ಗುರುತಿನ ಬಗ್ಗೆ ಯಾವುದೇ ತನಿಖೆ ಮಾಡಿರುವುದಿಲ್ಲ. 3 ನೇ ಆರೋಪಿಯು ಯಾವುದೇ ತಪ್ಪೊಪ್ಪಿಗೆ

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರಿಂದ 5 ಮತ್ತು ಚಾಸಾ 11 ರವರು 3 ನೇ ಆರೋಪಿಯ ಬಗ್ಗೆ ನನ್ನ ಸಮಕ್ಷಮ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪುಗಳನ್ನು ಮಾಡದೇ ಇದ್ದರೂ ಸಹಾ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿ, ಸರಿಯಾದ ತನಿಖೆ ಮಾಡದೇ, ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತಕ್ಷೀರು ನಡೆದಿದೆ ಎಂದು ಹೇಳುವುದಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.